O.S.No.370/2018
P.W.:2

ಈ ದಿನ ದಿಃ17.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ ಆರ್.ಸಿ ರವರಿಂದಃ-</u>

1. ಈ ದಾವೆಯನ್ನು ಯಾರು ಯಾರ ವಿರುದ್ಧ ಹೂಡಿರುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು ದಿಲೀಪ್ ಎನ್ನುವವರ ವಿರುದ್ಧ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಈ ದಾವೆಯನ್ನು ಪ್ರತಿವಾದಿಯು ನಮ್ಮ ಜಮೀನಿಗೆ ತೊಂದರೆ ಕೊಡುತ್ತಿದ್ದಾರೆ, ಬೆಳೆ ಹಾಳು ಮಾಡುತ್ತಿದ್ದಾರೆಂಬ ಕಾರಣಕ್ಕೆ ಹೂಡಿರುತ್ತೇವೆ. ನೀವು ಸಲ್ಲಿಸಿದ ದಾವೆಯಲ್ಲಿ ನೀವು ಸಾಕ್ಷ್ಯ ಹೇಳಲು ಬಂದಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಾನು ವಾದಿಯ ಪರವಾಗಿ ಅವರ ಕೇಸಿನಲ್ಲಿ ಸಾಕ್ಷ್ಯ ಹೇಳಲು ಬಂದಿದ್ದೇನೆ.

2. ನಾನು ಪ್ರತಿವಾದಿಯ ವಿರುದ್ಧ ಹೂಡಿದಂತಹ ದಾವೆಯಲ್ಲಿ ನನ್ನ ಪರವಾಗಿ ಈ ದಾವೆಯ ವಾದಿಯು ಬಂದು ಸಾಕ್ಷ್ಯ ನುಡಿದಿರುತ್ತಾರೆ ಎಂದರೆ ಸರಿ. ನಾನು ಸಲ್ಲಿಸಿದ ದಾವೆಯಲ್ಲಿ ವಾದಿಯು ನನ್ನ ಪರವಾಗಿ ಬಂದು ಸಾಕ್ಷ್ಯ ನುಡಿದಿದ್ದರಿಂದ ನಾನು ಆತನಿಗೆ ಸಹಾಯ ಮಾಡಲು ಈ ದಾವೆಯಲ್ಲಿ ಬಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಶಿವಕುಮಾರ್ ರವರ ಜಮೀನು, ಪಶ್ಚಿಮಕ್ಕೆ ಬೈಪಾಸ್ ರಸ್ತೆ, ಉತ್ತರಕ್ಕೆ ರಮೇಶ್ ರವರ ಜಮೀನು ಮತ್ತು ದಕ್ಷಿಣಕ್ಕೆ ನನಗೆ ಸಂಬಂಧಿಸಿದ ಜಮೀನು ಇರುತ್ತದೆ.

ನಾನು ಈ ಮೇಲೆ ಹೇಳಿದ ಚಕ್ಕುಬಂದಿಯು ದಾವಾಸ್ವತ್ತಿಗೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ.

3. ದಾವಾಸ್ವತ್ತನ್ನು ವಾದಿಯು ಯಾವಾಗ ಖರೀದಿ ಮಾಡಿರುತ್ತಾರೆಂದು ಖಚಿತವಾಗಿ ದಿನಾಂಕ, ತಿಂಗಳು ಮತ್ತು ವರ್ಷವನ್ನು ಹೇಳಲು ಬರುವುದಿಲ್ಲ. ವಾದಿಯು ದಾವಾಸ್ವತ್ತನ್ನು ಯಾರಿಂದ ಖರೀದಿ ಮಾಡಿರುತ್ತಾರೆ ಎನ್ನುವುದು ನನಗೆ ಈಗ ನೆನಪಿಲ್ಲ. ವಾದಿಯು ದಾವಾಸ್ವತ್ತನ್ನು ಎಷ್ಟು ಮೊತ್ತಕ್ಕೆ ಖರೀದಿಸಿದರು ಎನ್ನುವುದು ನನಗೆ ಗೊತ್ತಿಲ್ಲ. ವಾದಿಯು ದಾವಾಸ್ವತ್ತನ್ನು ಖರೀದಿಸುವ ಕಾಲಕ್ಕೆ ನೀವು ಏನಾದರೂ ಹಾಜರಿದ್ರ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ವಾದಿಯು ಯಾವ ಸರ್ವೆ ನಂಬರ್ ನಲ್ಲಿ ಎಷ್ಟು ವಿಸ್ತೀರ್ಣದ ಜಮೀನು ಖರೀದಿಸಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಅವರು ಸ್ವಾಧೀನದಲ್ಲಿರುವುದು ಮಾತ್ರ ಗೊತ್ತು ಎಂದು ನುಡಿಯುತ್ತಾರೆ. ವಾದಿಯು ಎಷ್ಟು ವಿಸ್ತೀರ್ಣದ ಜಮೀನಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ನನಗೆ ಗೊತ್ತಿಲ್ಲ.

4. ಪ್ರತಿವಾದಿಯು ವಾದಿಗೆ ಯಾವಾಗ ತೊಂದರೆ ಕೊಟ್ಟರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು 3-4ವರ್ಷಗಳ ಹಿಂದೆ ತೊಂದರೆ ಕೊಟ್ಟರು ಎಂದು ನುಡಿಯುತ್ತಾರೆ. ಪ್ರತಿವಾದಿಯು ಈ ರೀತಿ ತೊಂದರೆ ಕೊಟ್ಟ ದಿನಾಂಕ, ತಿಂಗಳು

ಮತ್ತು ವರ್ಷ ನನಗೆ ಹೇಳಲು ಆಗುವುದಿಲ್ಲ. ಪ್ರತಿವಾದಿಯು ಎಷ್ಟು ಗಂಟೆಗೆ ಈ ರೀತಿ ತೊಂದರೆ ಕೊಟ್ಟರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ, ಕಾರಣ ನಾನು ಆ ದಿನ ಮೈಸೂರಿನಲ್ಲಿ ಆಸ್ಪತ್ರೆಯಲ್ಲಿದ್ದೆ ಎಂದು ನುಡಿಯುತ್ತಾರೆ.

5. ದಾವಾಸ್ವತ್ತಿನ ದಕ್ಷಿಣಕ್ಕೆ ನನ್ನ ಜಮೀನು ಇದೆ ಎಂದರೆ ಸರಿ. ನನ್ನ ಜಮೀನಿನ ದಕ್ಷಿಣ ದಿಕ್ಕಿಗೆ ಪ್ರತಿವಾದಿಗೆ ಸೇರಿದ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಗೆ ಸಂಬಂಧಿಸಿದ ಯಾವುದೇ ಜಮೀನು ಅಲ್ಲಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ಮತ್ತು ವಾದಿಯ ಜಮೀನಿನ ಪೂರ್ವಕ್ಕೆ ಪ್ರತಿವಾದಿಯ ತಂದೆಯಾದ ಕೆ.ಬಿ ನಾಗರಾಜು ರವರಿಗೆ ಸೇರಿದ ಜಮೀನು ಬರುತ್ತದೆ ಎಂದರೆ ಸರಿಯಲ್ಲ. ನಮ್ಮ ಮತ್ತು ವಾದಿಯ ಜಮೀನುಗಳ ಪೂರ್ವಕ್ಕೆ ಪ್ರತಿವಾದಿ ಕುಟುಂಬದವರ ಜಮೀನು ಬರುವ ವಿಚಾರ ನನಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೂರ್ವ ದಿಕ್ಕಿಗೆ ಪ್ರತಿವಾದಿಯ ತಂದೆಯ ಜಮೀನು ಬರುತ್ತದೆ ಎಂಬ ವಿಚಾರ ನನಗೆ ಗೊತ್ತಿದ್ದರೂ ಆ ಜಮೀನನ್ನು ಸಹ ಸೇರಿಸಿ ಪೂರ್ವ ದಿಕ್ಕಿಗೆ ಶಿವಣ್ಣ ರವರ ಜಮೀನು ಬರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೂರ್ವಕ್ಕೆ ಬರುವ ತಮ್ಮ ಜಮೀನಿನಲ್ಲಿ ಕಲ್ಲು ಕಾಂಪೌಂಡುಗಳನ್ನು ಹಾಕಿಕೊಂಡು ಪ್ರತಿವಾದಿಯು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ.

6. ವಾದಿಯು ತಾವು ಖರೀದಿ ಮಾಡಿದ್ದ ಜಮೀನಿನಲ್ಲಿ ಮಾತ್ರ ಸ್ವಾಧೀನಾದಲ್ಲಿದ್ದಾರಾ ಅಥವಾ ಹೆಚ್ಚಿಗೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದಾರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರು ಖರೀದಿಸಿದ ಜಮೀನಿನಲ್ಲಿ ಮಾತ್ರ ಸ್ವಾಧೀನದಲ್ಲಿದ್ದಾರೆ ಎಂದು ನುಡಿಯುತ್ತಾರೆ. ಪೂರ್ವ ದಿಕ್ಕಿಗೆ ಬರುವ ಪ್ರತಿವಾದಿಗಳ ಜಮೀನನ್ನು ಕಬಳಿಸುವ ದುರುದ್ದೇಶದಿಂದ ಅವರ ಜಮೀನನ್ನು ಸಹ ಸೇರಿಸಿ ಸುಳ್ಳು ಚಕ್ಕುಬಂದಿಯನ್ನು ತೋರಿಸಿ ಈ ಸುಳ್ಳು ದಾವೆಯನ್ನು ವಾದಿಯು ಹೂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ನಮೂದಿಸಿದ ಚಕ್ಕುಬಂದಿಯ ನಡುವೆ ವಾದಿಯು ಯಾವತ್ತು ಸ್ವಾಧೀನಾನುಭವದಲ್ಲಿ ಇಲ್ಲ ಮತ್ತು ವ್ಯವಸಾಯವನ್ನು ಮಾಡುತ್ತಿಲ್ಲ ಎಂದರೆ ಸರಿಯಲ್ಲ.

7. ನನ್ನ ಮುಖ್ಯವಿಚಾರಣ ಪ್ರಮಾಣ ಪತ್ರದ ಸಂಗತಿಗಳನ್ನು ನನ್ನ ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ. ಪ್ರತಿವಾದಿ ತೊಂದರೆ ಕೊಡುವ ಸಮಯದಲ್ಲಿ ನಾನು ಸ್ಥಳದಲ್ಲಿ ಹಾಜರು ಇರಲಿಲ್ಲ ಎಂಬ ಸಂಗತಿಯನ್ನು ನನ್ನ ವಕೀಲರಿಗೆ ನಾನು ತಿಳಿಸಿರಲಿಲ್ಲ. ವಾದಿ ಮತ್ತು ನಾನು ಚೆನ್ನಾಗಿ ಇರುವ ಕಾರಣಕ್ಕೆ ಮತ್ತು ಪ್ರತಿವಾದಿ ಹಾಗೂ ಆತನ ಕುಟುಂಬದವರ ಮೇಲೆ ನಮಗೆ ಇರುವ ದ್ವೇಷದಿಂದಾಗಿ ವಾದಿಯು ಸಲ್ಲಿಸಿದ ಸುಳ್ಳು ದಾವೆಯಲ್ಲಿ ನಾನು ಆತನಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

O.S.No.370/2018
P.W.:2

**ಮರುವಿಚಾರಣೆ:- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**